**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.1081/2025**

ಪಿರ್ಯಾದಿ : ಬೀರೂರು ಪೋಲೀಸರು

-ವಿರುದ್ಧ-

ಆರೋಪಿ : ವಿನುತ್ ಸಿ.ಎಂ. ಬಿನ್ ಮಹೇಂದ್ರ,
ವಯಸ್ಸು ಸುಮಾರು 22 ವರ್ಷ,
ಕಂಪನಿಯಲ್ಲಿ ಕೆಲಸ,
ವಾಸಃ 2 ನೇ ಕ್ರಾಸ್, ಕುಂಬಾರ ಬೀದಿ,
ಬಸವಹನಳ್ಳಿ, ಚಿಕ್ಕಮಗಳೂರು ಟೌನ್,
ಚಿಕ್ಕಮಗಳೂರು ಜಿಲ್ಲೆ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **351** ರ ಪ್ರಕಾರ ಆರೋಪಿಯ ಹೇಳಿಕೆ

ಪ್ರಃ**1.** ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಆರೋಪಿಯ ಉತ್ತರಃ ಹೌದು

ಪ್ರಃ**2.** ಚಾಸಾ.1 ಲಕ್ಕಮ್ಮ ಇವರನ್ನು ಪ್ರಾಸಾ.1 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಮೃತ ವ್ಯಕ್ತಿ ತನ್ನ ಗಂಡ, ಚಾಸಾ-2 ರಿಂದ 5 ತನಗೆ ಗೊತ್ತು, ದಿನಾಂಕಃ05.12.2024 ರಂದು ಮೃತ ವ್ಯಕ್ತಿಯು ಬೆಳಗ್ಗೆ 7.00 ಗಂಟೆ ಸಮಯಕ್ಕೆ ಟಿ.ವಿ.ಎಸ್ ವಾಹನದಲ್ಲಿ ತೋಟದ ಕೆಲಸಕ್ಕೆ ಹೊರಟಿದ್ದು, ಸುಮಾರು 7.30 ಗಂಟೆಗೆ ಚಾಸಾ.2 ರವರು ಕರೆ ಮಾಡಿ ತನ್ನ ಗಂಡನಿಗೆ ಹಳ್ಳಿ ಮೇಸ್ತ್ರಿ ಅಡಿಕೆ ಗೋಡೌನ್ ಬಳಿ ಅಪಘಾತವಾಗಿರುವ ವಿಚಾರವನ್ನು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**3.** ಪ್ರಾಸಾ.1 ರವರು ಮುಂದುವರೆದು, ತಕ್ಷಣ ತಾನು ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ತನ್ನ ಗಂಡನ ತಲೆ, ಕೈ ಮತ್ತು ಎದೆ ಭಾಗಕ್ಕೆ ತೀವ್ರ ಸ್ವರೂಪದ ಗಾಯವಾಗಿದ್ದು, ಚಾಸಾ-2 ರವರು ಅಂಬುಲೆನ್ಸ್‌ಗೆ ಕರೆ ಮಾಡಿ ತನ್ನ ಗಂಡನನ್ನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**4.** ಪ್ರಾಸಾ.1 ರವರು ಮುಂದುವರೆದು, ನಂತರ ಅಲ್ಲಿ ವೈದ್ಯರು ಪರಿಶೀಲಿಸಿ ತನ್ನ ಗಂಡ ಮೃತಪಟ್ಟಿರುವುದಾಗಿ ತಿಳಿಸಿದ್ದು, ಅಪಘಾತದ ಬಗ್ಗೆ ಚಾಸಾ-2 ಮತ್ತು 3 ರವರಿಂದ

ತಿಳಿಯಲಾಗಿ ತನ್ನ ಗಂಡ ಚಾಲನೆ ಮಾಡುತಿದ್ದ ಎಕ್ಸ್.ಎಲ್ ವಾಹನಕ್ಕೆ ಮಹೇಂದ್ರ ಎಸ್.ಯು.ವಿ ವಾಹನದ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹಿಂದುಗಡೆಯಿಂದ ಡಿಕ್ಕಿಪಡಿಸಿರುತ್ತಾನೆ ಎಂದು ತಿಳಿಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**5.** ಪ್ರಾಸಾ.1 ರವರು ಮುಂದುವರೆದು, ನಂತರ ವಿಚಾರಿಸಲಾಗಿ ಮಹೇಂದ್ರ ವಾಹನದ ಚಾಲಕನ ಹೆಸರು ವಿನುತ್, ಚಿಕ್ಕಮಗಳೂರು ವಾಸಿ ಎಂದು ತಿಳಿದುಕೊಂಡಿದ್ದು, ಅದೇ ದಿನ ಬೀರೂರು ಪೋಲಿಸರಿಗೆ ನಿಪಿ.1 ರಂತೆ ದೂರು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**6.** ಪ್ರಾಸಾ.1 ರವರು ಮುಂದುವರೆದು, ನಂತರ ದೂರಿಗೆ ಸಂಬಂಧಿಸಿದಂತೆ ಘಟನೆ ನಡೆದ ಎರಡು ಮೂರು ದಿನಗಳ ನಂತರ ಘಟನಾ ಸ್ಥಳಕ್ಕೆ ಹೋಗಿದ್ದು, ಚಾಸಾ-4, 5 ರವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.00 ರಿಂದ 2.00 ರವರೆಗೆ ನಿಪಿ.2 ರಂತೆ ಮಹಜರ್ ಜರುಗಿಸಿರುತ್ತಾರೆ ಹಾಗೂ ಮಹಜರ್ ಸಮಯದಲ್ಲಿ ನಿಪಿ.3 ರಿಂದ ನಿಪಿ.8 ರಂತೆ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**7.** ಪ್ರಾಸಾ.1 ರವರು ಮುಂದುವರೆದು, ನಂತರ ಠಾಣೆಯಲ್ಲಿ ನಿಂತಿದ್ದ ಅಪಘಾತಪಡಿಸಿದ ಮತ್ತು ಅಪಘಾತಕ್ಕೊಳಗಾದ ವಾಹನಗಳನ್ನು ಮಧ್ಯಾಹ್ನ 2.00 ರಿಂದ 3.00 ರವರೆಗೆ ಚಾಸಾ-4, 5 ರವರ ಸಮಕ್ಷಮ ನಿಪಿ.9 ರಂತೆ ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿದ್ದು, ಅದೇ ಸಮಯದಲ್ಲಿ ನಿಪಿ.10 ರಿಂದ ನಿಪಿ.15 ರಂತೆ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ ಎಂದು ನುಡಿದು, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**8.** ಪ್ರಾಸಾ.1 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ಮೃತ ವ್ಯಕ್ತಿ ಚಲಾಯಿಸುತ್ತಿದ್ದ ವಾಹನದ ಸಂಖ್ಯೆ ಕೆಎ-66 ಕೆ-8675 ರ ಟಿ.ವಿ.ಎಸ್. ಎಕ್ಸ್‌ಎಲ್ ಆಗಿತ್ತು ಎಂದು ಹಾಗೂ ಅಪಘಾತವಾದ ಸ್ಥಳವು ಅಜ್ಜಂಪುರ ರಸ್ತೆಯ ಎಸ್.ಹೆಚ್ 76 ರ ಹಳ್ಳಿ ಮೇಸ್ತ್ರು ಅಡಿಕೆ

ಗೋಡೌನ್ ಹತ್ತಿರ ಎಂಬ ಸೂಚನೆಗಳನ್ನು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**9.** ಪ್ರಾಸಾ.1 ರವರು ಮುಂದುವರೆದು ತನ್ನ ಪಾಟೀ ಸವಾಲಿನಲ್ಲಿ, ಅಪಘಾತಪಡಿಸಿದ ವಾಹನದ ಸಂಖ್ಯೆ ಕೆಎ-32 ಹೆಚ್-3001 ನ ಮಹೇಂದ್ರು ಎಕ್ಸ್.ಯು.ವಿ. 500 ಆಗಿತ್ತು ಹಾಗೂ ಮಹಜರನ್ನು ದಿನಾಂಕಃ09.12.2024 ರಂದು ಜರುಗಿಸಿರುತ್ತಾರೆ ಎಂಬ ಸೂಚನೆಗಳನ್ನು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**10.** ಪ್ರಾಸಾ.1 ರವರು ಮುಂದುವರೆದು ತನ್ನ ಪಾಟೀ ಸವಾಲಿನಲ್ಲಿ, ನಂತರ ಸ್ಥಳ ಮಹಜರನ್ನು ನಾನು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.00 ರಿಂದ 2.00 ರವರೆಗೆ ಜರುಗಿಸಿರುತ್ತಾರೆ ಹಾಗೂ ಅಪಘಾತಕ್ಕೊಳಪಟ್ಟ ಮತ್ತು ಅಪಘಾತಪಡಿಸಿದ ವಾಹನದ ಅಮಾನತ್ತು ಮಹಜರನ್ನು ದಿನಾಂಕಃ09.12.2024 ರಂದು ಮಧ್ಯಾಹ್ನ 2.15 ರಿಂದ 3.15 ರವರೆಗೆ ನಿಪಿ-9 ರಂತೆ ಜರುಗಿಸಿರುತ್ತಾರೆ ಎಂಬ ಸೂಚನೆಗಳನ್ನು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**11.** ಚಾಸಾ.2 ರವಿ ಎಸ್.ಎಸ್. ಇವರನ್ನು ಪ್ರಾಸಾ.2 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತನ್ನ ನುಡಿ ಸಾಕ್ಷ್ಯದಲ್ಲಿ, ಮೃತ ವ್ಯಕ್ತಿ ಹಾಗೂ ಚಾಸಾ.1 ಮತ್ತು ಚಾಸಾ.3 ತನಗೆ ಗೊತ್ತು, ಅವರು ತಮ್ಮ ಗ್ರಾಮಸ್ಥರು, ದಿನಾಂಕಃ05.12.2024 ರಂದು ಅಜ್ಜಂಪುರ ರಸ್ತೆಯಲ್ಲಿರುವ ಸಮ್ಮ ತೋಟಕ್ಕೆ ಹೋಗುತ್ತಿದ್ದಾಗ, ಬೆಳಗ್ಗೆ 7.20 ರಿಂದ 7.30 ಸಮಯದಲ್ಲಿ ಅಜ್ಜಂಪುರ ಕಡೆಯಿಂದ ಮಹೇಂದ್ರು ಎಕ್ಸ್.ಯು.ವಿ. ಕಾರು ಅತೀವೇಗವಾಗಿ ಬಂದು ಮೃತ ವ್ಯಕ್ತಿ ಚಲಾಯಿಸುತ್ತಿದ್ದ ಟಿ.ವಿ.ಎಸ್ ಎಕ್ಸ್.ಎಲ್.ಗೆ ಡಿಕ್ಕಿಪಡಿಸಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**12.** ಪ್ರಾಸಾ.2 ರವರು ಮುಂದುವರೆದು, ನಂತರ ತಾನು ಶಬ್ದ ಕೇಳಿ ಹೋಗಿ ನೋಡಿದ್ದು, ಬಳಿಕ ಚಾಸಾ-3 ರವರು ಬಂದಿರುತ್ತಾರೆ, ಅಪಘಾತದಿಂದ ಮೃತ ವ್ಯಕ್ತಿ ಕೆಳಗೆ ಬಿದ್ದಿದ್ದು, ಅಲ್ಲೇ ಸಮೀಪ ಇದ್ದ ಹಳ್ಳಿ ಮೇಸ್ತ್ರು ಅಡಿಕೆ ಗೋದಾಮಿನ ಕಾರ್ಮಿಕರು ಅಲ್ಲಿ ಸೇರಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**13.** ಪ್ರಾಸಾ.2 ರವರು ಮುಂದುವರೆದು, ತಾನು ಹೋಗಿ ನೋಡಿದಾಗ, ಆ ವ್ಯಕ್ತಿ ತಮ್ಮ ಊರಿನ

ಬಸಪ್ಪ ಎಂದು ತಿಳಿದುಬಂದಿದ್ದು, ಆತನ ತಲೆಗೆ, ಕೈ ಕಾಲುಗಳಿಗೆ ಗಾಯವಾಗಿತ್ತು, ಈ ವಿಚಾರವನ್ನು ಗ್ರಾಮಸ್ಥರಿಗೆ ತಿಳಿಸಿದ್ದು, ಗ್ರಾಮಸ್ಥರು ಚಾಸಾ-1 ರವರಿಗೆ ತಿಳಿಸಿರುತ್ತಾರೆ. ನಂತರ ಚಾಸಾ-1 ರವರು ಸ್ಥಳಕ್ಕೆ ಬರುವ ಪೂರ್ವದಲ್ಲೇ ಅಂಬುಲೆನ್ಸ್‌ಗೆ ಕರೆ ಮಾಡಿದ್ದು, ಚಾಸಾ-1 ರವರು ಸ್ಥಳಕ್ಕೆ ಬಂದ ನಂತರ ಮೃತ ವ್ಯಕ್ತಿಯನ್ನು ಅಂಬುಲೆನ್ಸ್‌ನಲ್ಲಿ ಬೀರೂರು ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**14.** ಪ್ರಾಸಾ.2 ರವರು ಮುಂದುವರೆದು, ನಂತರ ಆಸ್ಪತ್ರೆಯಲ್ಲಿ ವೈದ್ಯರು ಪರಿಶೀಲಿಸಿ ಅವರು ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಘಟನೆಯ ನಂತರ ಪೋಲಿಸರು ತಮ್ಮನ್ನು ಕರೆಸಿ ಹೇಳಿಕೆ ಪಡೆದಿದ್ದು, ನಂತರ ಆರೋಪಿಯ ಹೆಸರು ವಿನುತ್, ಚಿಕ್ಕಮಗಳೂರು ಎಂದು ತಿಳಿದಿದ್ದು, ಅಪಘಾತ ಸ್ಥಳದಲ್ಲಿ ಆರೋಪಿ ಇದ್ದು, ಸದರಿ ಅಪಘಾತವು ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯ ಚಲಾನೆಯಿಂದಲೇ ಆಗಿರುತ್ತದೆ ಎಂದು ನುಡಿದು, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**15.** ಪ್ರಾಸಾ.2 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ಮೃತ ವ್ಯಕ್ತಿ ಚಲಾಯಿಸುತ್ತಿದ್ದ ವಾಹನ ಸಂಖ್ಯೆ ಕೆಎ-66 ಕೆ-8675 ಆಗಿತ್ತು ಹಾಗೂ ಆರೋಪಿ ಚಲಾಯಿಸುತ್ತಿದ್ದ ವಾಹನದ ಸಂಖ್ಯೆ ಕೆಎಲ್-32 ಹೆಚ್-3001 ಸಂಖ್ಯೆಯ ಮಹೇಂದ್ರ ಎಕ್ಸ್.ಯು.ವಿ 500 ಆಗಿತ್ತು ಎಂಬ ಸೂಚನೆಯನ್ನು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**16.** ಚಾಸಾ.3 ಧಾನಪ್ಪ.ಆರ್ ಇವರನ್ನು ಪ್ರಾಸಾ.3 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತನ್ನ ನುಡಿ ಸಾಕ್ಷ್ಯದಲ್ಲಿ, ಮೃತ ವ್ಯಕ್ತಿ ಹಾಗೂ ಚಾಸಾ-1 ಮತ್ತು 2 ತನಗೆ ಗೊತ್ತು, ದಿನಾಂಕಃ05.12.2024 ರಂದು ಬೆಳಗ್ಗೆ 7.15 ರಿಂದ 7.30 ರಲ್ಲಿ ಬೀರೂರು - ಅಜ್ಜಂಪುರ ರಸ್ತೆಯ ಹಳ್ಳಿ ಮೇಸ್ತ್ರು ಅಡಿಕೆ ಗೋಡೌನ್‌ನ ತೋಟದ ಸಮೀಪ ಅಡಿಕೆ ಒಣಗಲು ಹಾಕಿ ನಿಂತಿದ್ದಾಗ, ಮೃತ ವ್ಯಕ್ತಿಯು ರಸ್ತೆಯ ಎಡಬದಿಯಲ್ಲಿ ಬೈಕನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದಾಗ, ಹಿಂಭಾಗದಿಂದ ಅತೀವೇಗವಾಗಿ ಬಂದ ಕಾರು ಆತನಿಗೆ ಡಿಕ್ಕಿಪಡಿಸಿರುತ್ತದೆ. ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರ:**17.** ಪ್ರಾಸಾ.3 ರವರು ಮುಂದುವರೆದು, ಪರಿಣಾಮವಾಗಿ ಬಸವರಾಜಪ್ಪ ರವರು 8 ರಿಂದ 10 ಅಡಿ ಮೇಲಕ್ಕೆ ಹಾರಿ ಬೈಕ್ ಸಮೇತ ಕೆಳಗಡೆ ಬಿದ್ದಿದ್ದು, ಸ್ಥಳಕ್ಕೆ ಚಾಸಾ-2 ರವರು ಬಂದಿರುತ್ತಾರೆ. ನಂತರ ತಾನು ಹೋಗಿ ನೋಡಿದಾಗ ಬಸವರಾಜಪ್ಪ ರವರ ತಲೆಗೆ, ಎದೆಗೆ, ಕೈ ಕಾಲುಗಳಿಗೆ ತೀವ್ರ ಗಾಯವಾಗಿದ್ದು, ಚಾಸಾ-2 ರವರು ಅಂಬುಲೆನ್ಸ್‌ಗೆ ಕರೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**18.** ಪ್ರಾಸಾ.3 ರವರು ಮುಂದುವರೆದು, ನಂತರ ಚಾಸಾ-2 ರವರು ಸ್ಥಳದಿಂದ ಚಾಸಾ-1 ರವರಿಗೆ ಕರೆ ಮಾಡಿದ್ದು, ತಾನು ಮತ್ತು ಚಾಸಾ-2 ರವರು ಬಸವರಾಜಪ್ಪ ರವರನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ಅಂಬುಲೆನ್ಸ್‌ನಲ್ಲಿ ಕರೆದುಕೊಂಡು ಹೋಗಿರುತ್ತೇವೆ. ನಂತರ ಆಸ್ಪತ್ರೆಯಲ್ಲಿ ವೈದ್ಯರು ಪರಿಶೀಲಿಸಿ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**19.** ಪ್ರಾಸಾ.3 ರವರು ಮುಂದುವರೆದು, ಈ ಸಂಬಂಧ ಪೋಲಿಸರಿಗೆ ಚಾಸಾ-1 ರವರು ದೂರು ನೀಡಿದ್ದು, ಪಘಾತಪಡಿಸಿದ ವಾಹನದ ಚಾಲಕನ ಹೆಸರು ವಿನುತ್ ವಾಸ: ಚಿಕ್ಕಮಗಳೂರು ಎಂದು ತಿಳಿದುಕೊಂಡಿರುತ್ತೇನೆ ಹಾಗೂ ಈ ಸಂಬಂಧ ತಾನು ಪೋಲಿಸರಿಗೆ ದಿನಾಂಕ:12.12.2024 ರಂದು ಹೇಳಿಕೆ ನೀಡಿದ್ದು, ಅಪಘಾತವು ಆರೋಪಿಯ ಅತೀವೇಗದ ಚಾಲನೆಯಿಂದಲೇ ಆಗಿರುತ್ತದೆ ಎಂದು ನುಡಿದು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**20.** ಪ್ರಾಸಾ.3 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ಮೃತ ವ್ಯಕ್ತಿಯು ಚಲಾಯಿಸುತ್ತಿದ್ದ ವಾಹನದ ಸಂಖ್ಯೆ ಕೆಎ-66 ಕೆ-8675 ರ ಟಿ.ವಿ.ಎಸ್.ಎಕ್ಸ್.ಎಲ್ ಆಗಿತ್ತು ಹಾಗೂ ಅಪಘಾತಪಡಿಸಿದ ವಾಹನದ ಸಂಖ್ಯೆ ಕೆಎಲ್-32 ಹೆಚ್-3001 ನ ಮಹೇಂದ್ರ ಎಕ್ಸ್.ಯುವಿ 500 ಆಗಿತ್ತು, ಈ ಸಂಬಂಧ ಚಾಸಾ-1 ರವರು ಬೀರೂರು ಠಾಣೆಗೆ ದೂರು ನೀಡಿರುತ್ತಾರೆ ಎಂಬ ಸೂಚನೆಗಳನ್ನು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ**21.** ಚಾಸಾ.4 ಸೋಮಶೇಖರ್ ಇವರನ್ನು ಪ್ರಾಸಾ.4 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತನ್ನ ನುಡಿ ಸಾಕ್ಷ್ಯದಲ್ಲಿ, ಚಾಸಾ-1 ಮತ್ತು 5 ರವರು ತನಗೆ ಗೊತ್ತು, ಸುಮಾರು 2 ವರ್ಷಗಳ ಹಿಂದೆ ಬಸವರಾಜಪ್ಪರವರಿಗೆ ಅಜ್ಜಂಪುರ-ಬೀರೂರು ರಸ್ತೆಯಲ್ಲಿರುವ ಹಳ್ಳಿಮೇಸ್ತ್ರಿ ಗೋಡೌನ್ ಬಳಿ ಕಾರು ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ ಎಂದು, ಅಪಘಾತವಾದ ದಿನ ತಾನು ತೋಟದಲ್ಲಿದ್ದು, ಚಾಸಾ-1 ರವರು ಅಪಘಾತದ ವಿಷಯ ತಿಳಿಸಿದ ಮೇರೆಗೆ ತಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರ**22.** ಪ್ರಾಸಾ.4 ರವರು ಮುಂದುವರೆದು, ಅದೇ ದಿನ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಮಧ್ಯಾಹ್ನ 1.00 ರಿಂದ 2.00 ರವರೆಗೆ ಮಹಜರ್ ಜರುಗಿಸಿದ್ದು, ಆ ಸಮಯದಲ್ಲಿ ತಾನು ಮತ್ತು ಚಾಸಾ-5 ರವರು ಹಾಜರಿದ್ದು, ಪೋಲಿಸರು ಸ್ಥಳ ಮಹಜರಿಗೆ ಸಹಕರಿಸುವಂತೆ ನಿಪಿ.16 ರಂತೆ ನೋಟಿಸು ಜಾರಿಗೊಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರ**23.** ಪ್ರಾಸಾ.4 ರವರು ಮುಂದುವರೆದು, ನಂತರ ಪೋಲಿಸರಿಗೆ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಮಹಜರ್ ಸಮಯದಲ್ಲಿ ಪೋಲಿಸರು ಛಾಯಾಚಿತ್ರ ತೆಗೆಸಿ, ಸ್ಥಳದಲ್ಲಿ ಮಹಜರ್ ತಯಾರಿಸಿದ್ದು, ಸದರಿ ಮಹಜರಿಗೆ ತಾನು, ಚಾಸಾ-1 ಮತ್ತು ಚಾಸಾ.5 ರವರು ಸಹಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರ**24.** ಪ್ರಾಸಾ.4 ರವರು ಮುಂದುವರೆದು, ನಂತರ ಪೋಲಿಸರು ತಮ್ಮನ್ನು ಠಾಣೆ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ ಅಪಘಾತಪಡಿಸಿದ ಕೆಎಲ್-32 ಹೆಚ್-3001 ರ ಮಹೇಂದ್ರ ಜೈಲೋ ಕಾರು ಮತ್ತು ಕೆಎ-66 8675 ರ ಟಿ ವಿ ಎಸ್ ಎಕ್ಸ್.ಎಲ್ ವಾಹನವನ್ನು ಚಾಸಾ-1 ರವರು ತೋರಿಸಿದ ಮೇರೆಗೆ ಮಧ್ಯಾಹ್ನ 2.00 ರಿಂದ 3.00 ಗಂಟೆ ಸಮಯದವರೆಗೆ ಮಹಜರ್ ಮೂಲಕ ಮುಂದಿನ ಕ್ರಮಕ್ಕಾಗಿ ವಶಪಡಿಸಿಕೊಂಡಿರುತ್ತಾರೆ ಎಂದು ನುಡಿದು, ಸದರಿ ಸಮಯದಲ್ಲಿ ತೆಗೆಯಲಾದ ನಿಪಿ-10 ರಿಂದ 15 ರ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರ:**25.** ಚಾಸಾ.5 ಗೋವಿಂದಸ್ವಾಮಿ ಇವರನ್ನು ಪ್ರಾಸಾ.5 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತನ್ನ ನುಡಿ ಸಾಕ್ಷ್ಯದಲ್ಲಿ, ಚಾಸಾ-1 ಮತ್ತು 4 ರವರು ತನಗೆ ಗೊತ್ತು, ಡಿಸೆಂಬರ್ 2024 ರಲ್ಲಿ ಮೃತ ಬಸವರಾಜಪ್ಪರವರಿಗೆ ಅಪಘಾತವಾದ ವಿಚಾರಕ್ಕೆ ಸಂಬಂಧಿಸಿದಂತೆ ಅಜ್ಜಂಪುರ - ಬೀರೂರು ರಸ್ತೆಯಲ್ಲಿರುವ ಹಳ್ಳಿ ಮೇಸ್ತ್ರಿ ಗೋಡೌನ್ ಬಳಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ತನ್ನ ಮತ್ತು ಚಾಸಾ-4 ರವರ ಸಮಕ್ಷಮದಲ್ಲಿ ಮಧ್ಯಾಹ್ನ 1.00 ರಿಂದ 2.00 ರವರೆಗೆ ಸ್ಥಳ ಮಹಜರ್ ಜರುಗಿಸಿ ಛಾಯಾಚಿತ್ರ ತೆಗೆಸಿದ್ದು, ಮಹಜರಿಗೆ ತಾನು ಮತ್ತು ಚಾಸಾ-1 ಮತ್ತು 4 ರವರು ಸಹಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**26.** ಪ್ರಾಸಾ.5 ರವರು ಮುಂದುವರೆದು, ನಂತರ ಬೀರೂರು ಪೋಲಿಸ್ ವಸತಿಗೃಹದ ಬಳಿ ಮಧ್ಯಾಹ್ನ 2.30 ರಿಂದ 3.30 ರವರೆಗೆ ಅಮಾನತ್ ಮಹಜರ್ ಜರುಗಿಸಿ, ಛಾಯಾಚಿತ್ರ ತೆಗೆಸಿದ್ದು, ಚಾಸಾ-1 ರವರು ತೋರಿಸಿದ ಕೆಎಲ್-32 ಹೆಚ್-3001 ಕಾರನ್ನು ಮತ್ತು ಟಿ.ವಿ.ಎಸ್. ಎಕ್ಸ್.ಎಲ್ ವಾಹನವನ್ನು ವಶಪಡಿಸಿಕೊಂಡಿದ್ದು, ಅಪಘಾತವಾದ ಬಳಿ ತನ್ನ ಜಮೀನು ಇದ್ದ ಕಾರಣ ತಾನು ಮಹಜರಿಗೆ ಹೋಗಿರುತ್ತೇನೆ ಎಂದು ನುಡಿದು ಅಮಾನತ್ ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-10 ರಿಂದ 15 ರ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**27.** ಪ್ರಾಸಾ.5 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ದಿನಾಂಕ:05.12.2024 ರಂದು ಅಪಘಾತವಾದ ವಿಚಾರವಾಗಿ ದಿನಾಂಕ: 09.12.2024 ರಂದು ಸ್ಥಳ ಮಹಜರ್ ಮತ್ತು ಅಮಾನತ್ ಮಹಜರ್ ಜರುಗಿಸಲು ನನಗೆ ಮತ್ತು ಚಾಸಾ-4 ರವರೆಗೆ ನೋಟಿಸು ಜಾರಿ ಮಾಡಿ ಕರೆಸಿರುತ್ತಾರೆ ಎಂಬ ಸೂಚನೆಯನ್ನು ಹೌದು ಎಂದು ಒಪ್ಪಿಕೊಂಡಿರುತ್ತಾರೆ.

ಆರೋಪಿಯ ಉತ್ತರ: ಸುಳ್ಳು

ಪ್ರ:**28.** ಪ್ರಾಸಾ.5 ರವರು ಮುಂದುವರೆದು, ಮಧ್ಯಾಹ್ನ 1.00 ರಿಂದ 2.00 ರವರೆಗೆ ಮಹಜರ್ ಜರುಗಿಸಿರುತ್ತಾರೆ ಹಾಗೂ ಅಪಘಾತಕ್ಕೊಳಗಾದ ಟಿ.ವಿ.ಎಸ್. ವಾಹನದ ಸಂಖ್ಯೆ ಕೆಎ-66 ಕೆ-8675 ವಾಹನ ಮತ್ತು ಕಾರನ್ನು ಮಧ್ಯಾಹ್ನ 2.15 ರಿಂದ 3.00 ರವರೆಗೆ ಅಮಾನತ್

ಮಹಜರ್ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ ಎಂಬ ಸೂಚನೆಯನ್ನು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**29.** ಚಾಸಾ.15 ಬಿ ರವಿ ಇವರನ್ನು ಪ್ರಾಸಾ.6 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ05.12.2024 ರಂದು ಬೆಳಗ್ಗೆ 8.30 ಗಂಟೆ ಸಮಯದಲ್ಲಿ ತಾನು ಬೀರೂರು ಪೋಲಿಸ್ ಠಾಣೆಯಲ್ಲಿ ಠಾಣಾ ಪ್ರಭಾರೆಯಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ-1ರ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 160/2024 ರಂತೆ ಪ್ರಕರಣ ದಾಖಲು ಮಾಡಿ ನಿಪಿ.17 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ ಹಾಗೂ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-16 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**30.** ಚಾಸಾ.16 ಎಸ್.ಎನ್. ಶ್ರೀಕಾಂತ್ ಇವರನ್ನು ಪ್ರಾಸಾ.7 ಎಂದು ವಿಚಾರಣೆ ಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ05.12.2024 ರಂದು ಪ್ರಕರಣದ ಕಡತವನ್ನು ಚಾಸಾ-15 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿನಾಂಕಃ09.12.2024 ರಂದು ಕೃತ್ಯ ಸ್ಥಳವಾದ ಬೀರೂರು - ಅಜ್ಜಂಪುರ ಎನ್.ಹೆಚ್ 76 ರಸ್ತೆಯಲ್ಲಿ ಚಾಸಾ-1 ರವರು ಹಾಜರಿದ್ದು, ಅವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.00 ರಿಂದ 2.00 ರವರೆಗೆ ಮಹಜರನ್ನು ಚಾಸಾ-4 ಮತ್ತು 5ರವರ ಸಮಕ್ಷಮ ಜರುಗಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**31.** ಪ್ರಾಸಾ.7 ರವರು ಮುಂದುವರೆದು, ಚಾಸಾ-4 ಮತ್ತು ಚಾಸಾ.5 ರವರಿಗೆ ಸ್ಥಳದಲ್ಲಿ ಹಾಜರಿರುವಂತೆ ನಿಪಿ-16ರಂತೆ ನೋಟಿಸನ್ನು ಜಾರಿ ಮಾಡಿ, ಸ್ಥಳ ಮಹಜರ್ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ, ನಿಪಿ-3 ರಿಂದ ನಿಪಿ-8ರ ಛಾಯಾಚಿತ್ರಗಳನ್ನು ತೆಗೆಸಿ, ಅದೇ ದಿನ ಬೀರೂರು ಪೋಲಿಸ್ ವಸತಿಗೃಹಗಳ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತವಾದ ಮತ್ತು ಅಪಘಾತಪಡಿಸಿದ ವಾಹನಗಳನ್ನು ಚಾಸಾ-1ರವರು ತೋರಿಸಿದ ಮೇರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-9ರ ಮಹಜರ್ ಮೂಲಕ ಕೆಎ-66 ಕೆ-8675 ಟಿ.ವಿ.ಎಸ್. ಎಕ್ಸ್.ಎಲ್ ಬೈಕ್ ಹಾಗೂ ಅಪಘಾತಮಾಡಿದ ಕೆಎಲ್-32 ಹೆಚ್-3001 ಸಿಲ್ವರ್ ಬಣ್ಣದ ಮಹೇಂದ್ರ ಎಕ್ಸ್ಯುವಿ 500 ವಾಹನವನ್ನು ಮಧ್ಯಾಹ್ನ 2.15 ರಿಂದ 3.00 ರ ಸಮಯದಲ್ಲಿ ವಶಪಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರ:**32.** ಪ್ರಾಸಾ.7 ರವರು ಮುಂದುವರೆದು, ನಂತರ ಅದೇ ಸಮಯದಲ್ಲಿ ನಿಪಿ-10 ರಿಂದ 15ರ ಛಾಯಾಚಿತ್ರಗಳನ್ನು ತೆಗೆಸಿ, ಛಾಯಾಚಿತ್ರ ತೆಗೆದ ಬಗ್ಗೆ ಚಾಸಾ-13 ರವರು ನಿಪಿ.18ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4) ರ ಪ್ರಮಾಣಪತ್ರವನ್ನು ನೀಡಿದ್ದು, ಅದನ್ನು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ದಿನಾಂಕ:05.12.2024 ರಂದು ಕಾರಿನ ಆರ್.ಸಿ ಮಾಲೀಕರಾದ ಆರೋಪಿ ವಿನುತ್ ಮತ್ತು ಟಿ.ವಿ.ಎಸ್ ಮಾಲೀಕರಾದ ಚಾಸಾ-1 ರವರಿಗೆ ಕಲಂ 133ರಂತೆ ನೋಟಿಸು ಜಾರಿ ಮಾಡಿದ್ದು, ನಂತರ ದಿನಾಂಕ:16.12.2024 ರಂದು ಆರೋಪಿಯು ಠಾಣೆಗೆ ಹಾಜರಾಗಿ ಕಲಂ 133ರ ನೋಟಿಸಿಗೆ ಉತ್ತರವನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**33.** ಪ್ರಾಸಾ.7 ರವರು ಮುಂದುವರೆದು, ನಂತರ ಅವರಿಂದ ನಷ್ಟಭರ್ತಿ ಬಾಂಡನ್ನು ಪಡೆದು ಕಾರನ್ನು ಮಧ್ಯಂತರ ವಶಕ್ಕೆ ನೀಡಿ, ಆರೋಪಿಗೆ ಬಿ.ಎನ್.ಎಸ್.ಎಸ್. ಕಲಂ 35(3) ರಂತೆ ನೋಟಿಸನ್ನು ಜಾರಿ ಮಾಡಿ, ಠಾಣೆಗೆ ಮತ್ತು ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**34.** ಪ್ರಾಸಾ.7 ರವರು ಮುಂದುವರೆದು, ನಂತರ ದಿನಾಂಕ:09.12.2024 ರಂದು ಚಾಸಾ.10 ರವರಿಂದ ಅಪಘಾತಕ್ಕೊಳಪಟ್ಟ ವಾಹನಗಳ ಯಾಂತ್ರಿಕ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿ, ಸಾಕ್ಷಿದಾರರಾದ ಚಾಸಾ-6 ರಿಂದ 9 ರವರ ಹೇಳಿಕೆ ದಾಖಲಿಸಿ, ನಂತರ ದಿನಾಂಕ:28.12.2024 ರಂದು ಕಲಂ 133ರ ನೋಟಿಸಿಗೆ ಚಾಸಾ-1ರವರು ಉತ್ತರವನ್ನು ನೀಡಿದ್ದು, ಅವರಿಂದ ವಾಹನದ ದಾಖಲೆಗಳು ಮತ್ತು ನಷ್ಟಭರ್ತಿ ಬಾಂಡನ್ನು ಪಡೆದು ದ್ವಿಚಕ್ರ ವಾಹನವನ್ನು ಮಧ್ಯಂತರ ವಶಕ್ಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರ: ಸುಳ್ಳು

ಪ್ರ:**35.** ಪ್ರಾಸಾ.7 ರವರು ಮುಂದುವರೆದು, ನಂತರ ದಿನಾಂಕ:12.12.2024 ರಂದು ಸಾಕ್ಷಿದಾರರಾದ ಚಾಸಾ-2 ಮತ್ತು 3ರವರ ಹೇಳಿಕೆ ದಾಖಲಿಸಿ, ಅದೇ ದಿನ ಚಾಸಾ-11 ರವರಿಂದ ಮೃತ ವ್ಯಕ್ತಿಯ ಮರಣೋತ್ತರ ವರದಿಯನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡು, ನಂತರ ದಿನಾಂಕ:06.12.2024 ರಂದು ಚಾಸಾ-14ರವರು ನಿಪಿ.19 ರಂತೆ ನೀಡಿದ ಶವ ತನಿಖಾ ವರದಿಯನ್ನು ತಂದು ಹಾಜರುಪಡಿಸಿದ್ದನ್ನು ಕಡತಕ್ಕೆ ಅಳವಡಿಸಿರುತ್ತೇನೆ ಹಾಗೂ ದಿನಾಂಕ:20.02.2025 ರಂದು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ

ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**36.** ಪ್ರಾಸಾ.7 ರವರು ಮುಂದುವರೆದು, ಎರಡು ಕಲಂ 133 ರ ನೋಟಿಸುಗಳನ್ನು ನಿಪಿ-20 ಮತ್ತು ನಿಪಿ.21, ಎರಡು ಕಲಂ 133 ರ ನೋಟಿಸಿಗೆ ನೀಡಿದ ಉತ್ತರಗಳನ್ನು ನಿಪಿ.22 ಮತ್ತು 23, ಎರಡು ಇಂಡಮ್ನಿಟಿ ಬಾಂಡುಗಳನ್ನು ನಿಪಿ-24 ಮತ್ತು 25, ಶವ ಪರೀಕ್ಷಾ ವರದಿಯನ್ನು ನಿಪಿ-26, ಐ.ಎಂ.ವಿ. ವರದಿಯನ್ನು ನಿಪಿ-27, ಆರೋಪಿಗೆ ನೀಡಿದ ನೋಟಿಸನ್ನು ನಿಪಿ-28 ಎಂದು ಗುರುತಿಸಿ, ನಂತರ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ ಸುಳ್ಳು

ಪ್ರಃ**37.** ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ ಅಥವಾ ಲಿಖಿತವಾಗಿ ಹೇಳಿಕೆ ನೀಡುವುದೇನಾದರೂ ಇದೆಯೇ?

ಆರೋಪಿಯ ಉತ್ತರಃ ಇಲ್ಲ

ಪ್ರಃ**38.** ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಆರೋಪಿಯ ಉತ್ತರಃ ಇಲ್ಲ

(ಈ ಮೇಲ್ಕಂಡ ಹೇಳಿಕೆಯನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಯಥವತ್ತಾಗಿ ಬರೆದುಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸಿದ್ದೇನೆ.)

ದಿನಾಂಕ : 14.08.2026

ಸಹಿ/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಕಡೂರು.

ಆರೋಪಿ ಸಹಿಃ